ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ನಿಯಮಗಳು 1992ರನ್ವಯ ಸಂಬಂಧಿಸಿದ ವಿಭಾಗಾಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೇಲ್ಮನವಿಗಳನ್ನು ಸಂಬಂಧಿಸಿದ ವಿಭಾಗಾಧಿಕಾರಿಗಳಿಗೆ ಸಲ್ಲಿಸಬಹುದು.

ಈ) ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಲುಗಣಿಗಾರಿಕೆ ಪರವಾನಿಗೆ ಕುರಿತು.

2573 (3902)

ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ ಎಷ್ಟು ಜನರಿಗೆ ಯಾವ ಯಾವ ಸ್ಥಳಗಳಲ್ಲಿ ಎಷ್ಟು ವರ್ಷಕ್ಕೆ ಕಲ್ಲು ಗಣಿಗಾರಿಕೆಗೆ ಪರವಾನಿಗೆ ನೀಡಲಾಗಿದೆ? (ಖಾಸಗಿ ಮತ್ತು ಸರ್ಕಾರಿ ಸ್ಥಳಗಳ ಪರವಾನಿಗೆ ವಿವರ ನೀಡುವುದು)

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಲು ಗಣಿಗಾರಿಕೆಗೆ ಪರವಾನಿಗೆ ಕೋರಿ ಎಷ್ಟು ಜನರು ಅರ್ಜಿ ಸಲ್ಲಿಸಿರುತ್ತಾರೆ, ಎಷ್ಟು ಸಮಯದಿಂದ ಅರ್ಜಿಗಳು ವಿಲೇವಾರಿ ಆಗದೇ ಉಳಿದಿರುತ್ತದೆ? (ತಾಲ್ಲೂಕುವಾರು ಮತ್ತು ಸ್ಥಳವಾರು ಪೂರ್ಣ ವಿವರ ನೀಡುವುದು)

ಶ್ರೀ ಎಸ್.ಡಿ.ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1162 ಜನರಿಗೆ ಐದು ವರ್ಷದ ಅವಧಿಗೆ (ಮಂಜೂರಾದ ದಿನಾಂಕದಿಂದ) ಗುತ್ತಿಗೆಯನ್ನು ನೀಡಲಾಗಿದೆ ಅದರ ವಿವರ ಈ ಕೆಳಕಂಡಂತೆ ಇವೆ.

| ತಾಲ್ಲೂಕು | ಕಟ್ಟಡ ಕಲ್ಲು ಗುತ್ತಿಗೆ ಸಂಖ್ಯೆ | ಮುರಕಲ್ಲು ಗುತ್ತಿಗೆ ಸಂ. | ಸಾಮಾನ್ಯ ಮರಳು ಗುತ್ತಿಗೆ ಸಂ | ಜೇಡಿ ಮಣ್ಣು ಗುತ್ತಿಗೆ ಸಂ. |
|---|---|---|---|---|
| ಬೆಳ್ತಂಗಡಿ | 44 | 9 | 11 | - |
| ಮತ್ತೂರು | 9 | 34 | 5 | - |
| ಸುಳ್ಯ | 24 | 34 | 4 | - |

| | | | | |
|---|---|---|---|---|
| ಮಂಗಳೂರು | 91 | 74 | 63 | - |
| ಬಂಟ್ವಾಳ | 82 | 51 | 34 | 1 |
| ಕಾರ್ಕಳ | 233 | 40 | 14 | - |
| ಉಡುಪಿ | 149 | 12 | 61 | 1 |
| ಕುಂದಾಪುರ | 49 | 19 | 14 | - |

ಆ) ಒಟ್ಟು ಸ್ವೀಕೃತವಾದ ಅರ್ಜಿಗಳ ಸಂಖ್ಯೆ - 442

ವಿಲೇವಾರಿ ಮಾಡಲಾದ ಅರ್ಜಿಗಳ ಸಂಖ್ಯೆ - 325

ಬಾಕಿ ಉಳಿದ ಅರ್ಜಿಗಳ ಸಂಖ್ಯೆ - 116

ವಿವರ ಈ ಕೆಳಕಂಡಂತಿವೆ:

| ತಾಲ್ಲೂಕು | ಮುರುಕಲ್ಲು ಬಾಕಿ ಅರ್ಜಿಗಳ ಸಂಖ್ಯೆ | ಕಟ್ಟಡಕಲ್ಲು ಬಾಕಿ ಅರ್ಜಿಗಳ ಸಂಖ್ಯೆ | ಸಾಮಾನ್ಯ ಮರಳು ಬಾಕಿ ಅರ್ಜಿಗಳ ಸಂ. | ಒಟ್ಟು |
|---|---|---|---|---|
| ಕಾರ್ಕಳ | 9 | 21 | 2 | 32 |
| ಉಡುಪಿ | 2 | 18 | 1 | 21 |
| ಮಂಗಳೂರು | 9 | 5 | 9 | 23 |
| ಕುಂದಾಪುರ | 4 | 2 | 3 | 9 |
| ಬಂಟ್ವಾಳ | 2 | 10 | 2 | 14 |
| ಪುತ್ತೂರು | 2 | 1 | 2 | 5 |
| ಸುಳ್ಯ | 7 | 3 | - | 10 |
| ಬೆಳ್ತಂಗಡಿ | 2 | - | - | 2 |